ರಾಜ್ಯದಲ್ಲಿ ಚಿಕೂನ್ ಗುನ್ಯಾ ಹರಡುತ್ತಿರುವ ಬಗ್ಗೆ

174 (556) ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಚಿಕೂನ್ ಗುನ್ಯಾ ಮಾರಕ ರೋಗ ಹರಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇಲ್ಲಿಯವರೆವಿಗೂ ತೆಗೆದುಕೊಂಡಿರುವ ಕ್ರಮಗಳೇನು;

ಆ) ಚಿಕೂನ್ ಗುನ್ಯಾ ಖಾಯಿಲೆಗೆ ತುತ್ತಾದವರ ಜಿಲ್ಲಾವಾರು ಮತ್ತು ನಗರ ಪಟ್ಟಣಗಳ ಅಂಕಿ ಅಂಶಗಳನ್ನು ಒದಗಿಸುವುದು.

ಇ) ರಾಜಾಜಿನಗರ ಕ್ಷೇತ್ರದಲ್ಲಿ ಚಿಕೂನ್ ಗುನ್ಯಾ ಖಾಯಿಲೆಗೆ ತುತ್ತಾದವರ ಸಂಖ್ಯೆ ಎಷ್ಟು; ವಾರ್ಡ್‌ವಾರು ಅಂಕಿಅಂಶಗಳನ್ನು ಒದಗಿಸುವುದು.

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು. ಆದರೆ ಮಾರಕ ರೋಗವಲ್ಲ. ಸರ್ಕಾರವು ಈ ರೋಗದ ನಿಯಂತ್ರಣಕ್ಕಾಗಿ ತೆಗೆದುಕೊಂಡಿರುವ ಕ್ರಮಗಳು

1. ಜ್ವರ ಪ್ರಕರಣಗಳು ತೀವ್ರವಾಗಿ ವರದಿಯಾದ ಪ್ರದೇಶಗಳಲ್ಲಿ ಸ್ಥಳೀಯವಾಗಿ ಚಿಕಿತ್ಸಾಲಯಗಳನ್ನು ತೆರೆದು, ವೈದ್ಯರುಗಳನ್ನು ನಿಯೋಜಿಸಿ ದಿನದ 24 ಗಂಟೆಯೂ ತ್ವರಿತ ಚಿಕಿತ್ಸೆ ಸಿಗುವಂತೆ ವ್ಯವಸ್ಥೆ ಮಾಡಲಾಗಿದೆ.

2. ತುರ್ತು ಸಂದರ್ಭಗಳಲ್ಲಿ ರೋಗಿಗಳನ್ನು ದೊಡ್ಡ ಆಸ್ಪತ್ರೆಗಳಿಗೆ ಸಾಗಿಸಲು ಅನುಕೂಲವಾಗುವಂತೆ ಆಂಬುಲೆನ್ಸ್ ವಾಹನ ಸೌಕರ್ಯವನ್ನು ಒದಗಿಸುವ ವ್ಯವಸ್ಥೆ ಮಾಡಲಾಗಿದೆ.

3. ಜನರು ಆತಂಕಕ್ಕೆ ಒಳಗಾಗದಂತೆ, ಸೂಕ್ತ ಆರೋಗ್ಯ ಶಿಕ್ಷಣದ ಮೂಲಕ, ಅವರು ಕೈಗೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ ಎಲ್ಲಾ ರೀತಿಯ ಮಾಹಿತಿ ನೀಡಿ ಇವುಗಳನ್ನು ತಪ್ಪದೇ ಪಾಲಿಸುವಂತೆ ಅವರ ಮನವೊಲಿಸಿ, ಸ್ಥಳೀಯ ಮುಖಂಡರು ಹಾಗೂ ಸ್ವಯಂಸೇವಾ ಸಂಸ್ಥೆಗಳು, ಸಮಾಜ ಸೇವಕರುಗಳನ್ನೊಳಗೊಂಡ ಸಮುದಾಯದ ಸಕ್ರಿಯ ಭಾಗವಹಿಸುವಿಕೆಗಾಗಿ ಆರೋಗ್ಯ ಶಿಕ್ಷಣ ಚಟುವಟಿಕೆಗಳನ್ನು ಚುರುಕುಗೊಳಿಸಿದೆ.

4. ಸ್ವಯಂ ರಕ್ಷಣಾ ವಿಧಾನಗಳ ಅನುಸರಣೆ, ಪರಿಸರ ನೈರ್ಮಲ್ಯ, ನೀರು ಶೇಖರಣಾ ವಿಧಾನಗಳಲ್ಲಿ ಸೂಕ್ತ ಮಾರ್ಪಾಡುಗಳು, ಕುಡಿಯುವ ನೀರಿನ ಸೂಕ್ತ ನಿರ್ವಹಣೆ ಇವೇ ಮೊದಲಾದ ಕ್ರಮಗಳನ್ನು ಕೈಗೊಳ್ಳಲು ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ.

5. ಗ್ರಾಮ ಪಂಚಾಯತಿ / ತಾಲ್ಲೂಕು ಪಂಚಾಯತಿ ಹಾಗೂ ಸ್ಥಳೀಯ ಸಂಸ್ಥೆಗಳ ಸದಸ್ಯರುಗಳನ್ನು ಸಂಪರ್ಕಿಸಿ ಇಲಾಖೆಯು ಕೈಗೊಂಡ ಕ್ರಮಗಳು ಸದಸ್ಯರು ಕೈಗೊಳ್ಳಬೇಕಾದ

ಚಟುವಟಿಕೆಗಳ ಬಗ್ಗೆ ಸೂಕ್ತ ಮಾಹಿತಿ ನೀಡಿ ರೋಗ ತಡೆಗಟ್ಟಲು ನಿಯಂತ್ರಿಸಲು ಅವರ ಸಂಪೂರ್ಣ ಸಹಕಾರ ಪಡೆಯುವಂತೆ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಗೆ ಸೂಚನೆಗಳನ್ನು ನೀಡಲಾಗಿದೆ.

6. ಜ್ವರದ ಉಲ್ಬಣತೆಗೆ ಕಾರಣವನ್ನು ಪತ್ತೆ ಮಾಡಲು ಜಿಲ್ಲಾ ಪ್ರಯೋಗ ಶಾಲಾ ತಂತ್ರಜ್ಞರು, ಜಿಲ್ಲಾ ಕೀಟಶಾಸ್ತ್ರಜ್ಞರು ಮತ್ತು ಎಲ್ಲಾ ಸರ್ವೇಕ್ಷಣಾ ಅಧಿಕಾರಿಗಳ ತಂಡವನ್ನು ರಚಿಸಿದ್ದು ತ್ವರಿತವಾಗಿ ಸ್ಥಳ ಸಮೀಕ್ಷೆಗಾಗಿ ನಿಯೋಜಿಸಿ, ತುರ್ತಾಗಿ ರೋಗ ವಾಹಕಗಳ ಸೂಕ್ತ ನಿಯಂತ್ರಣಾ ಕ್ರಮಗಳನ್ನು ಕೈಗೊಳ್ಳುವುದೇ ಅಲ್ಲದೇ ಕೀಟನಾಶಕ ಧೂಮೀಕರಣ, ಕೀಟನಾಶಕ ಸಿಂಪಡಣೆ, ಲಾರ್ವಾಹಾರಿ ಮೀನುಗಳ ಬಿಡುಗಡೆ, ಮುಂತಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

7. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಇತರ ಇಲಾಖಾಧಿಕಾರಿಗಳ ಸಮನ್ವಯ ಸಮಿತಿಯನ್ನು ಕ್ರಮವಾಗಿ ಜಿಲ್ಲಾಧಿಕಾರಿಗಳ ಹಾಗೂ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ರಚಿಸಿ ಸಭೆಗಳನ್ನು ಕರೆದು ಪರಿಸ್ಥಿತಿಯ ಪರಿವೀಕ್ಷಣೆ ಅಧ್ಯಯನ ಹಾಗೂ ಕಾರ್ಯತಂತ್ರ ರೂಪು ರೇಷೆಗಳನ್ನು ಯೋಜಿಸಿ, ಅನುಷ್ಠಾನಗೊಳಿಸಲಾಗುತ್ತಿದೆ.

8. ರೋಗದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಅರಿವು ಮೂಡಿಸಲು ಪ್ರತಿದಿನ ಆಕಾಶವಾಣಿಯಲ್ಲಿ ಪ್ರಚಾರ ಮಾಡುತ್ತಿದ್ದು ದಿನಪತ್ರಿಕೆಗಳಲ್ಲಿ ಜಾಹೀರಾತು ಮತ್ತು ಭಿತ್ತಿಪತ್ರ / ಕರಪತ್ರಗಳ ಮೂಲಕ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

ಆ) ಅನುಬಂಧ–I ಲಗತ್ತಿಸಲಾಗಿದೆ.

ಇ) ರಾಜಾಜಿನಗರ ಕ್ಷೇತ್ರದಲ್ಲಿ ಏಳು ಚಿಕೂನ್‌ಗುನ್ಯಾ ಪ್ರಕರಣಗಳು ವರದಿಯಾಗಿರುತ್ತದೆ. ವಾರ್ಡ್ ನಂ.8ರಲ್ಲಿ ಮೂರು ಪ್ರಕರಣಗಳು 9ರಲ್ಲಿ ಮೂರು ಪ್ರಕರಣಗಳು ಮತ್ತು ವಾರ್ಡ್ ನಂ.21ರಲ್ಲಿ ಒಂದು ಪ್ರಕರಣ ವರದಿಯಾಗಿರುತ್ತದೆ.

Name of State : Karnataka

MONTH WISE REPORT FOR CHIKUNGUNYA

Date : 24-6-2006

Total No. of Districts : 27

SL. NO.	Name of affected district	No. of blocks (Taluks) affected				Affected Population (Cumulative)	Total No. of Fever/Suspected cases for Chikungunya			
		Upto Apr. 30	May	June till date	Total		Upto Apr. 30	May	June till date	Total
1	2	3	4	5	6	7	8	9	10	11
1	Bangalore (R)	4	4	0	8	349868	1616	1550	6024	9190
2	Bangalore (U)	1	1	1	3	86050	87	132	2418	2637
3	Bidar	5		0	5	175947	31479	10159	139	41777
4	Kolar	5	3	3	11	220127	793	3206	10278	14277
5	Gadag	4		1	5	88900	701	661	4061	5423
6	Bagalkote	1	3	2	6	403694	689	2104	2198	4991
7	Shimoga	1	4	2	7	99906	128	4916	8808	13852
8	Davanagere	6		1	7	924854	1500	15025	3422	19947
9	Bijapura	5		0	5	612780	1770	2057	1706	5533
10	Chitradurga	5		1	6	664471	8919	11732	4154	24805

1	2	3	4	5	6	7	8	9	10	11
11	Raichur	5		0	5	388174	18022	0	0	18022
12	Bellary	6		0	6	412867	3749	5866	0	9615
13	Tumkur	8	1	1	10	568325	16291	13091	4930	34312
14	Gulbarga	10		0	10	1891007	41067	11785	1684	54536
15	Haveri	2	4	1	7	357668	182	717	5335	6234
16	Belgaum	1	2	3	6	53354	33	145	391	569
17	Dharwar		5	0	5	51654		1198	7641	883
18	Hassan		2	0	2	58820		173	248	421
19	U. Kannada		3	1	4	38706		34	175	209
20	Chikkamagalore		1	2	3	31345		1037	2790	3827
21	Koppal	4		0	4	427808	759	4638	386	5783
22	D. Kannada			1	1	3600		0	9	9
23	Mandya			6	6	20753		0	699	699
24	Mysore			1	1	117119		0	138	138
25	Chamarajanagara			1	1			0	92	92
26	Udupi			3	3			0	10	10
	Total	**73**	**33**	**31**	**137**	**7947797**	**127785**	**90226**	**67736**	**28574**

Blood samples collected				Tested possitive			
Upto Apr.	May	June till date	Total	Upto Apr. 30	May	June till date	Total
12	13	14	15	16	17	18	19
68	65	18	151	4+*	12		16+*
10	0	18	28	1	2		3
174	0	0	174	43+*			43+*
25	26	10	61		11		11
13	5	0	18	5			5
109	46	20	175	5			5
7	82	131	220	2	2		4
124	95	14	233	2			2
57	16	37	110	4			4
83	0	48	131	2+*			2+*
169	0	0	169	13			13+*
348	0	0	348	*	1		1+*
146	106	29	281	3+*	6		9+*
488	0	0	488	8	1		9
5	38	35	78	2	6		8

12	13	14	15	16	17	18	19
8	91	0	99		1		1
	56	11	67		1		1
	72	60	132				
	17	20	37				
	93	300	393		2		2
51	45	13	109	4	1		5
	0	7	7				
	0	44	44				
	0	12	12				
	0	6	6				
	0	2	2				
1885	**853**	**835**	**3573**	**98+*61**	**46**	**0**	**144+*61**

Note: *61 cases are confirmed for Chikungunya +ve from BANGALORE (Rural), BIDAR, CHITRADURGA, BELLARY and TUMKUR Districts as per NIV, Bangalore Field Satation. No.NIV/BFS/2811-1056 dt. 29 March 2006.

6.30 P.M.

ಶ್ರೀ ಸಿ.ಎಲ್. ನರೇಂದ್ರಬಾಬು : ಮಾನ್ಯ ಛೇರ್ಮನ್‌ರವರೆ, ಉತ್ತರವನ್ನು ಒದಗಿಸಿದ್ದಾರೆ. ಈ ಉತ್ತರದಲ್ಲಿ ಹೇಳಿರುವಂತೆ ಈ ಬೆಂಗಳೂರು ನಗರದಲ್ಲಿರುವ ಹಾಗೂ ಹೊರವಲಯದಲ್ಲಿರುವ ಸುಮಾರು 60 ರಿಂದ 70 ಲಕ್ಷ ಜನಸಂಖ್ಯೆಯಲ್ಲಿ ಇವತ್ತು ಚಿಕೂನ್ ಗುನ್ಯಾ ಕಾಯಿಲೆಗೆ ತುತ್ತಾಗಿರುವಂತಹ ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ಆದರೆ ನಗರಕ್ಕೆ ಸಂಬಂಧಪಟ್ಟ ವಿವರವನ್ನು ಕೊಟ್ಟಿಲ್ಲ. ಈ ಚಾರ್ಟ್‌ನಲ್ಲಿ ನೋಡಿದೆ ಮಂತ್‌ವೈಜ್ ರಿಪೋರ್ಜ್ ಫಾರ್ ಚಿಕೂನ್ ಗುನ್ಯಾ ಎಂದು ಹೇಳಿದೆ. ಅದರಲ್ಲಿ ಬೆಂಗಳೂರು ರೂರಲ್ ಅಂಡ್ ಅರ್ಬನ್ ಎಂದು ಕೊಟ್ಟಿದ್ದಾರೆ. ಆದರೆ ಬೆಂಗಳೂರು ಮಹಾನಗರ ಪಾಲಿಕೆಯದು ಕೊಟ್ಟಿಲ್ಲ. ಕೇವಲ ಎರಡು ಐಟಂಗಳು ಕವರ್ ಮಾಡಿದ್ದೀರಿ. ಮತ್ತು ನಾನು ತಮ್ಮ ಮುಖೇನ ಏನಂತಿ ಮಾಡುವುದೇನೆಂದರೆ ಬೆಂಗಳೂರು ನಗರದಲ್ಲಿ ಶೇಕಡ 65ರಷ್ಟು ಮೆಡಿಕಲ್ ಪ್ರಾಕ್ಟಿಷನರ್ಸ್ ಮತ್ತು ಖಾಸಗಿ ನರ್ಸಿಂಗ್ ಹೋಮ್‌ಗಳು ಇವತ್ತು ನೋಡಿಕೊಳ್ಳುತ್ತಿರುವುದು. 30 ಪರ್ಸೆಂಟ್ ಮಾತ್ರ ಗೌವರ್ನ್‌ಮೆಂಟ್ ಸೆಕ್ಟರ್‌ಗಳಾದ ವಿಕ್ಟೋರಿಯಾ ಇರಬಹುದು, ಕೆ.ಸಿ.ಜೆ ಇರಬಹುದು, ಬೌರಿಂಗ್ ಇರಬಹುದು ಕಾಪೊರೇಷನ್ ಹಾಸ್ಪಿಟಲ್ಸ್ ಇರಬಹುದು. ನೀವು ಈ ಆಸ್ಪತ್ರೆಗಳ ಅಂಕಿಅಂಶಗಳನ್ನು ಕೊಟ್ಟಿದ್ದೀರಲ್ಲಾ ಇದು ಸತ್ಯಕ್ಕೆ ದೂರವಾದುದು. ನಾನೇ ಸ್ವತಃ ನಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ನಮ್ಮ ಎಂ.ಓ.ಹೆಚ್ ಗಳನ್ನು ಕರೆದುಕೊಂಡು ಹೋಗಿ ಸಮೀಕ್ಷೆ ಮಾಡಿದಾಗ ಅದರಲ್ಲೂ ಸುಮಾರು 25 ರಿಂದ 30 ಕೇಸುಗಳನ್ನು ಮನೆಗೆ ಹೋಗಿ ಭೇಟಿ ಮಾಡಿದ್ದೇನೆ. ನೀವು ಒಂದು ನೆಟ್‌ವರ್ಕ್ ಮಾಡಬೇಕಾಗುತ್ತದೆ. ದಯವಿಟ್ಟು ಈ ಮೆಡಿಕಲ್ ಪ್ರಾಕ್ಟಿಷನರ್ಸ್ ಏನಿದ್ದಾರೆ ಮತ್ತು ನರ್ಸಿಂಗ್ ಹೋಮ್ಸ್ ಏನಿವೆ, ಅದಕ್ಕೆ ಒಂದು ನೆಟ್‌ವರ್ಕ್ ಮಾಡಿ. ಅವರನ್ನು ನಿಯಂತ್ರಣದಲ್ಲಿಡಿ. ಎಲ್ಲಿ ಇಂತಹ ಎಪಿಡಮಿಕ್ ಡಿಸೀಜ್‌ಗಳು ರಿಪೋರ್ಟ್ ಆದಾಗ ಕೂಡಲೇ ಮಹಾನಗರ ಪಾಲಿಕೆಯ ಗಮನಕ್ಕೆ ತರಬೇಕು. ಇಲ್ಲದೆ ಇದ್ದರೆ ಬಹಳ ಕಷ್ಟವಾಗುತ್ತದೆ. ಸಂಪೂರ್ಣವಾದಂತಹ ದಾಖಲೆ ತಮಗೆ ಕಳುಹಿಸಿ ಕೊಡುತ್ತೇನೆ. ತಾವು ಮಾಹಿತಿಯನ್ನು ತಪ್ಪಾಗಿ ಕೊಟ್ಟಿದ್ದೀರಿ ಅದರ ಬಗ್ಗೆ ಹೇಳಬೇಕು.

ಶ್ರೀ ಆರ್. ಅಶೋಕ್ : ಮಾನ್ಯ ಛೇರ್ಮನ್‌ರವರೆ, ಈಗಾಗಲೆ ಚಿಕೂನ್ ಗುನ್ಯಾ ಕಾಯಿಲೆ ವಿಚಾರದಲ್ಲಿ ಇಡೀ ರಾಜ್ಯದಲ್ಲಿ ಏನೇನಾಗಿದೆ ಎನ್ನುವ ಮಾಹಿತಿಯನ್ನು ಕೊಟ್ಟಿದ್ದೇನೆ. ಬೆಂಗಳೂರಿನ ವಿಚಾರವನ್ನು ಮಾನ್ಯ ಸದಸ್ಯರಾದ ನರೇಂದ್ರಬಾಬು ಅವರು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಬೆಂಗಳೂರಿನ ಮಹಾನಗರ ವ್ಯಾಪ್ತಿಯಲ್ಲಿ ಇರುವಂಥಾದ್ದಕ್ಕೆ ಮಹಾನಗರ ಪಾಲಿಕೆ ಆಯುಕ್ತರಿಗೆ ಇದರ ವಿಚಾರವಾಗಿ ಏನೇನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಒಂದು ಸಭೆಯನ್ನೂ ಸಹ ನಾನು ಮಾಡಿದ್ದೇನೆ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹತ್ತು ಫಾಗಿಂಗ್ ಮೆಷಿನ್ಸ್ ಇವೆ. ಅದನ್ನು ನೂರಕ್ಕೆ ಏರಿಸಬೇಕೆಂದು ನಾನು ಈಗಾಗಲೇ ನಿರ್ದೇಶನವನ್ನು ಕೊಟ್ಟಿದ್ದೇನೆ. ದಿ: 19.6.ರಿಂದ ಫಾಗಿಂಗ್ ಪ್ರಾರಂಭವಾಗಿದೆ. 19ನೇ ತಾರೀಖಿನಂದು ಎಲ್ಲಾ ಕಡೆ ಬೆಂಗಳೂರಿನಲ್ಲಿ

ಫಾಗಿಂಗ್ ಮಾಡಬೇಕೆಂದು ನಿರ್ದೇಶನವನ್ನು ಕೊಟ್ಟಿದ್ದೇನೆ. ಮತ್ತು ಟಿ.ವಿ. ಮುಖಾಂತರ ಹಾಗೂ ಮಾಧ್ಯಮದ ಮುಖಾಂತರ ಹಾಗೂ ಕರಪತ್ರವನ್ನು ಹೊರಡಿಸುವುದರ ಮೂಲಕ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು, ಶುದ್ಧವಾಗಿಟ್ಟುಕೊಳ್ಳಬೇಕು ಎಂದು ತಿಳಿಸುವುದರ ಬಗ್ಗೆ ಕೂಡ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಹಾಗೆಯೇ ಮಹಾನಗರ ವ್ಯಾಪ್ತಿಗೆ ಬರುವಂತಹ ಚರಂಡಿಗಳು ಇರಬಹುದು, ಸ್ಟಾರ್ಮ್ ವಾಟರ್ ಡ್ರೈನ್ಸ್ ಇರಬಹುದು, ಸಿಲ್ಟ್ ಎತ್ತುವಂತಾದ್ದು ಮತ್ತು ಪರಿಸರವನ್ನು ಶುದ್ಧಿ ಮಾಡುವಂತಾದ್ದು, ಔಷಧಿಗಳನ್ನು ಸಿಂಪರಣೆ ಮಾಡುವಂತಾದ್ದು ಇಂತಹ ಎಲ್ಲಾ ಕಾರ್ಯಕ್ರಮಗಳನ್ನು ನಾನೀಗಾಗಲೆ ಹಮ್ಮಿಕೊಂಡಿದ್ದೇನೆ. ಈ ಕಾರ್ಯಕ್ರಮವನ್ನು ತ್ವರಿತವಾಗಿ ಮಾಡುವುದರ ಮುಖಾಂತರ ಚಿಕೂನ್ ಗುನ್ಯಾ ಏನು ಬೆಂಗಳೂರು ನಗರದಲ್ಲೂ ಕಾಲಿಟ್ಟಿದೆ ಅದನ್ನು ತಡೆಗಟ್ಟುವುದಕ್ಕೆ ಏನೆಲ್ಲಾ ಕ್ರಮ ತೆಗೆದುಕೊಳ್ಳಬೇಕು ಆ ರೀತಿ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ನರೇಂದ್ರ ಬಾಬು ಅವರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಈ ಚಿಕೂನ್ ಗುನ್ಯಾ ಕಾಯಿಲೆಯನ್ನು ಹೇಳುವುದೇ ಕಷ್ಟವಾಗುತ್ತದೆ. ಇದು ಚಿಕನ್ ಅಥವಾ ಚಿಕೂನ್ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಇರಲಿ, ಅದರ ಬಗ್ಗೆ ಚಿಂತೆ ಇಲ್ಲ. ಆದರೆ ಬಹಳ ಜನಕ್ಕೆ ಚಿಕೂನ್ ಕಾಯಿಲೆ ಎಂದು ಎಲ್ಲಾ ಕಡೆ ಹೇಳುತ್ತಾರೆ. ಚಿಕೂನ್ ಎಂದು ಅವರು ಹೇಳುವುದೇ ಇಲ್ಲ. ಅದು ಇರಲಿ, ನಾನು ತಮಗೆ ಕೇಳುವುದೇನೆಂದರೆ ಬರೀ ಸಾಮಾನ್ಯ ಜನಗಳಿಗೆ ಈ ರೋಗ ತಗಲುತಿದೆಯಲ್ಲಾ, ಮಂತ್ರಿಗಳಿಗೆ, ಶಾಸಕರುಗಳಿಗೆ, ಐ.ಎ.ಎಸ್. ಅಧಿಕಾರಿಗಳಿಗೆ, ಐ.ಪಿ.ಎಸ್. ಅಧಿಕಾರಿಗಳಿಗೆ ಇವರ್ಯಾರಿಗಾದರೂ ಒಬ್ಬರಿಗೆ ಈ ಕಾಯಿಲೆ ಬಂದಿದೆಯೇ? ಇದಕ್ಕೆ ತಾವು ನೇರವಾಗಿ ಹೇಳಬೇಕು. ಇದು ಶಾಸಕರಿಗಾಗಲಿ, ಮಂತ್ರಿಗಳಿಗಾಗಲಿ, ಐ.ಎ.ಎಸ್. ಅಧಿಕಾರಿಗಳಿಗಾಗಲಿ ಅಥವಾ ಐ.ಪಿ.ಎಸ್. ಅಧಿಕಾರಿಗಳಿಗಾಗಲಿ ಪತ್ರಕರ್ತರಿಗಾಗಲಿ ಯಾರಿಗಾದರೂ ಒಬ್ಬರಿಗೆ ಈ ಚಿಕೂನ್ ಗುನ್ಯಾ ಕಾಯಿಲೆ ಬಂದಿದೆಯೇ? ಆ ರೀತಿ ಯಾರಾದರೂ ಔಷಧವನ್ನು ತೆಗೆದುಕೊಳ್ಳುವುದಕ್ಕೆ ಕಾಯಿಲೆ ಬಂದಿರುವವರು ಹೋಗಿದ್ದಾರೆಯೇ? ದಯವಿಟ್ಟು ತಾವು ತಿಳಿಸಬೇಕು.

ಶ್ರೀ ಬಸವರಾಜ್ ರಾಯರೆಡ್ಡಿ : ಕೊಳಚೆ ಪ್ರದೇಶಕ್ಕೂ, ಚಿಕೂನ್ ಗುನ್ಯಾಕ್ಕೂ ಸಂಬಂಧ ಇಲ್ಲ. ಎಲ್ಲ ಫ್ರೆಶ್ ವಾಟರ್ ಇದೆ ಅಂತಹ ಕಡೆ ಮಾತ್ರ ಚಿಕೂನ್ ಗುನ್ಯಾ ಬರುತ್ತದೆ. ಕೊಳಚೆ ಪ್ರದೇಶದಲ್ಲಿ ಚಿಕೂನ್ ಗುನ್ಯಾ ಬರುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು : ಡಾಕ್ಟರುಗಳಿಗೆ ಚಿಕೂನ್ ಗುನ್ಯಾ ಕಾಯಿಲೆ ಬಂದಿದೆ.

ಶ್ರೀ ಎಸ್. ರಾಜೇಂದ್ರನ್ : ಇಲ್ಲ, ಸ್ಲಮ್‌ನಲ್ಲಿ ಬಂದೇ ಇಲ್ಲವೆ? ವಿಲೇಜ್‌ನಲ್ಲಿ ಬಂದಿಲ್ಲವೆ? ಇವರು ನೋಡಿ ಹೋಗಿದ್ದಾರೆ. ಫ್ರೆಶ್, ಎಲ್ಲಿ ಬೆಸ್ಲೇರಿ ಇಟ್ಟಿದೆ ಅಲ್ಲಿ ಬಂದಿಲ್ಲ ಎಲ್ಲಾ ಕಡೆ ಇದೆ ಅದು.

ಶ್ರೀ ವಾಟಾಳ್ ನಾಗರಾಜ್ : ಈ ಚಿಕೂನ್ ಗುನ್ಯಾ ಕಾಯಿಲೆ ದೊಡ್ಡವರಿಗೆ ಬರುವುದಿಲ್ಲವೇ ಎಂಬುದು ನನಗೆ ಇರುವ ಅನುಮಾನ. ಅದಕ್ಕೆ ಇನ್ನೂ ಸ್ವಲ್ಪ ಸೇರಿಸುತ್ತೇನೆ, ಮಠಾಧಿಪತಿಗಳಿಗೆ ಬರುವುದಿಲ್ಲವೇ? ಬರಲಿ ನಮ್ಮೆಲ್ಲರನ್ನೂ ಸೇರಿಸಿ ಹೇಳಿದ್ದೇನೆ. ಚಿಕೂನ್ ಗುನ್ಯಾ ಕಾಯಿಲೆ

ಶಾಸಕರುಗಳಿಗೆ, ಮಂತ್ರಿಗಳಿಗೆ, ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳಿಗೆ, ಪತ್ರಕರ್ತರಿಗೆ ಹಾಗೂ ಮಠಾಧಿಪತಿಗಳಿಗೆ ಮತ್ತು ದೊಡ್ಡ ದೊಡ್ಡ ಶ್ರೀಮಂತರಿಗೆ ಇವರಿಗ್ಯಾರಿಗಾದರೂ ಬಂದಿದೆಯಾ? ಯಾರಿಗಾದರೂ ಗಮನಕ್ಕೆ ಬಂದಿದ್ದರೆ ದಯವಿಟ್ಟು ತಿಳಿಸಿ, ಇದನ್ನು ಲಘುವಾಗಿ ತೆಗೆದುಕೊಳ್ಳುವುದಲ್ಲ, ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಏಕೆ ಇದು ಕೇವಲ ಆ ಜನಕ್ಕೆ ಬರುತ್ತದೆ, ಇವರ್ಯಾರಿಗೂ ಏಕೆ ಬರುವುದಿಲ್ಲ? ಎಂತಹ ತಾರತಮ್ಯ ಈ ರೋಗಕ್ಕೆ ಈ ರೋಗಕ್ಕೆ? ಏನು ರೋಗ ಬಂದಿದೆ? ಬೇರೆಯವರಿಗೆ ಏಕೆ ಬರುವುದಿಲ್ಲ. ಕಾರಣವೇನು?

ಚೇರ್‌ಮನ್ : ಅವರು ತಾರತಮ್ಯ ಮಾಡುವುದಿಲ್ಲ. ಅವರಿಗೆ ಏಕೆ ತಾರತಮ್ಯ ಎಂದು ಹೇಳುತ್ತೀರಿ?

ಶ್ರೀ ನಿ.ಲ. ನರೇಂದ್ರಬಾಬು : ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿಯಂತ್ರಣ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದರು. ಒಂದು ತಮ್ಮ ಗಮನಕ್ಕೆ ತರುವುದೇನೆಂದರೆ ಎಲ್ಲಿಯವರೆಗೆ ಬೆಂಗಳೂರು ನಗರದ ಸ್ವಾರ್ಮ್ ವಾಟರ್ ಡ್ರೈನ್‌ನಲ್ಲಿ ನೀವು ಸ್ಯಾನಿಟರಿಯನ್ನು ಬಿಡಬ್ಲ್ಯೂಎಸ್‌ಎಸ್‌ಬಿ ಮುಖೇನ ಕರೆಕ್ಟಾಗಿ ನಿಯಂತ್ರಣ ಮಾಡಿ ನಿಲ್ಲಿಸುವುದಿಲ್ಲ, ಅಲ್ಲಿಯವರೆಗೂ ಮಸ್ಕಿಟೋ ಮೇಜರ್ ಬ್ರೀಡಿಂಗ್ ಆಗುವುದು ನಿಲ್ಲುವುದಿಲ್ಲಿ. ಮತ್ತು ಎರಡನೆಯದಾಗಿ ಈ ಕಾಯಿಲೆ ಬಗ್ಗೆ ಅಂಕಿಅಂಶ ಏನು ಕೊಟ್ಟಿದ್ದೀರಿ, ಅದು ನಿಮ್ಮ ಅಧಿಕಾರಿಗಳಿಂದ ನಿಮ್ಮ ಸರ್ಕಾರಕ್ಕೆ ಬಂದಿರುವಂತಹ ವರದಿಯನ್ನು ಕೊಡುತ್ತೀರಿ. ಆದರೆ ಪ್ರೈವೇಟ್ ಪ್ರಾಕ್ಟಿಷನರ್ಸ್‌ರವರಿಂದ ರಿಪೋರ್ಟ್ ತರಿಸುವಂತಹ ವಿಚಾರದಲ್ಲಿ ನೆಟ್‌ವರ್ಕ್ ಅನ್ನು ಸರ್ಕಾರ ಏಕೆ ಮಾಡಿಲ್ಲ? ಇದನ್ನು ಯಾವಾಗ ಮಾಡುತ್ತೀರಾ? ಉದಾಹರಣೆಗೆ ಹೇಳುವುದಾದರೆ ಒಂದು ಬ್ಲಡ್ ಸ್ಯಾಂಪಲ್ ಟೆಸ್ಟ್‌ಗೆ ಸ್ವತಃ ನನ್ನ ಮಗನದ್ದು ನಾನು ಹೋದಾಗ ಕೇಳಿದೆ, ಅದಕ್ಕೆ 1,450 ರೂಪಾಯಿ ಡಯಾಗ್ನಸ್ಟಿಕ್ ಸೆಂಟರ್‌ನಲ್ಲಿ ಕೊಟ್ಟೆ. ಹಾಗಾದರೆ ಸಾಮಾನ್ಯ ಜನರ ಗತಿಯೇನಾಗಬೇಕು? ಬ್ಲಡ್ ಸ್ಯಾಂಪಲ್ ಟೆಸ್ಟ್‌ಗೆ ಎಷ್ಟು ಬೆಲೆನೋ ಗೊತ್ತಿಲ್ಲ, ಆದರೆ ನಾವು ಬಯಕ್ಕೆ ಮಾಡಿಸಿ ತೆಗೆದುಕೊಳ್ಳುತ್ತೇವೆ ಈ ಒಂದು ಕಾಯಿಲೆ ಕೆಲವರಿಗೆ ಹಬ್ಬವಾಗಿದೆ. ಕೆಲವು ಪ್ರಾಕ್ಟಿಷನರ್ಸ್ ಅಂತೂ ಪ್ಯಾರಸಿಟಮಲ್ ಕೊಡುವುದು ಮಾಡುತ್ತಾರೆ. ದಯವಿಟ್ಟು ಹೇಳುತ್ತೇನೆ, ಸರ್ಕಾರ ಬೆಂಗಳೂರು ಮಹಾನಗರ ಪಾಲಿಕೆ ಒಂದು ಕರ್ಫೂರ ಇದ್ದಹಾಗೆ. ಸಣ್ಣ ಒಂದು ಕಾಯಿಲೆ ಬಂದರೆ ಇಡೀ ನಗರದ ಸುತ್ತ ವ್ಯಾಪ್ತಿಸುತ್ತದೆ. ಇದನ್ನು ಈ ರಾಜಧಾನಿಯಲ್ಲಿ ತಡೆಗಟ್ಟಬೇಕು ಎಂದರೆ ನೀವು ಈ ಸ್ವಾರ್ಮ್ ವಾಟರ್ ಡ್ರೈನ್‌ಗೆ ಸಂಬಂಧಪಟ್ಟ ಹಾಗೆ ಮತ್ತು ಈ ಪ್ರಾಕ್ಷಿಷನರ್ಸ್ ನಿಯಂತ್ರಣ ಮಾಡುವುದಕ್ಕೆ ಏನಾದರೂ ಒಂದು ಮಸೂದೆ ತರುತ್ತೀರಾ ಹೇಗೆ ತರುತ್ತೀರಾ? ಇದನ್ನು ಮಾಡಬೇಕು. ಇದೊಂದು ಸಣ್ಣ ಡಿಸೀಜ್ ಅನ್ನು ಕಂಟ್ರೋಲ್ ಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗುತ್ತಿಲ್ಲವೆಂದರೆ ಹೇಗೆ? ಮಂಗನ ಕಾಯಿಲೆ ಬಂತು, ಆಗಲೂ ಕೂಡ ಅದನ್ನು ನಿಯಂತ್ರಣ ಮಾಡುವ ವಿಚಾರದಲ್ಲಿ ನಾವು ಎಷ್ಟು ಹೇಳಿದೆವು ಎಂಬುದು ತಮಗೆ ಗೊತ್ತು. ನಾವು ಹೇಗೆ ಪಲ್ಸ್ ಪೋಲಿಯೋ ಡ್ರಾಪ್ಸ್ ಹಾಕುವುದಕ್ಕೆ ಸಮರೋಪಾದಿಯಲ್ಲಿ ಕೈಗೆತ್ತಿಕೊಳ್ಳುತ್ತೇವೆ ಹಾಗೆ ನೀವು ರೋಟರಿ ಲಯನ್ಸ್ ಮತ್ತು ಕಾಲೇಜುಗಳಲ್ಲಿ ಜನರಿಗೆ ಅವೇರ್‌ನಸ್ ನೀಡಬೇಕು. ಒಂದು ಮಸ್ಕಿಟೋ ಬ್ರೀಡಿಂಗ್ ಕಂಟ್ರೋಲ್ ಮಾಡಬೇಕು,

ಎರಡನೆಯದು ಅವೇರ್‌ನೆಸ್ ಹಾಗೂ ಮೂರನೆಯದಾಗಿ ಈ ವೈರಸ್ ಅನ್ನು ಐಡೆಂಟಿಫೈ ಮಾಡಿ ಚಿಕಿತ್ಸೆಗೆ ಒಂದು ರೇಟ್ ಫಿಕ್ಸ್ ಮಾಡಿ. ನಮಗೆ ನೋವು ಗೊತ್ತಿದೆ, ಒಂದೊಂದು ಬ್ಲಡ್ ಸ್ಯಾಂಪಲ್ ಟೆಸ್ಟ್‌ಗೆ ಇಷ್ಟೊಂದು ದುಡ್ಡು ಕೊಡಬೇಕೆಂದರೆ ಬಡವರ ಗತಿಯೇನಾಗಬೇಕು?

ಶ್ರೀ ಜಿ.ಎಸ್. ಗಡ್ಡದೇವರ ಮಳ್ : ಚಿಕೂನ್ ಗುನ್ಯಾದ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ಇದುವರೆಗೂ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಹಾಗೂ ಎಲ್ಲ ಜನರಲ್ಲಿ ಒಂದು ಕಲ್ಪನೆ ಇತ್ತು ಎಂದರೆ ಇದು ಮರಣಾಂತಿಕವಾದಂತಹ ಕಾಯಿಲೆಯಲ್ಲ, ಸುಮಾರು ನಾಲ್ಕೈದು ದಿವಸ ಮನುಷ್ಯ ಜ್ವರ ಆಗಿ ನೋವು ತಿನ್ನುವಂತಹ ಪ್ರಸಂಗ ಬಂದು ಆಮೇಲೆ ಆರಾಮವಾಗುತ್ತದೆ ಎನ್ನುವಂತಹ ವಿಚಾರ ಇತ್ತು. ಆದರೆ ಇತ್ತೀಚೆಗೆ ಯಾರು ಅಶಕ್ತರಿರುತ್ತಾರೆ, ಮಕ್ಕಳು ಇರುತ್ತಾರೆ, ವಯೋವೃದ್ಧರು ಇರುತ್ತಾರೆ, ಅಂತಹವರಿಗೆ ಚಿಕೂನ್‌ಗುನ್ಯಾ ಆದರೆ 103 ರಿಂದ 104 ಡಿಗ್ರಿ ಜ್ವರ ಬರುತ್ತದೆ. ಅಂತಹ ಸಂದರ್ಭದಲ್ಲಿ ಮರಣ ಸಂಭವಿಸಿದಂಥ ಉದಾಹರಣೆಗಳು ಸಾಕಷ್ಟು ಇವತ್ತು ಗ್ರಾಮೀಣ ಪ್ರದೇಶದಲ್ಲಿ ಇದೆ. ಆದುದರಿಂದ ಇದನ್ನು ಬಹಳ ಹಗುರವಾಗಿ ತೆಗೆದುಕೊಳ್ಳುವುದಲ್ಲ, ಸರ್ಕಾರ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಆದಷ್ಟು ಬೇಗ ಈ ಕಾಯಿಲೆಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯತೆ ಇದೆ ಅದನ್ನು ಮಾಡಿ. ಈಗ ನನ್ನ ತಾಲ್ಲೂಕಿನಲ್ಲಿ ಸುಮಾರು ಐದಾರು ಜನ ಇವತ್ತು ವಯೋವೃದ್ಧರಾಗಲಿ ಅಥವಾ ಮಕ್ಕಳಾಗಲಿ ಯಾರಿಗೆ ವಿಶೇಷವಾಗಿ ರೋಗ ನಿರೋಧಕ ಶಕ್ತಿ ಕಡಿಮೆ ಇರುತ್ತದೆ ಅವರು ಮರಣಿಸುವಂತಹ ಪ್ರಸಂಗಗಳಾಗಿವೆ. ಅದರ ಉದಾಹರಣೆಗಳು ಸಹ ಇದೆ. 103 ರಿಂದ 104 ಡಿಗ್ರಿ ಜ್ವರ ಬಂದಾಗ ಅದನ್ನು ತೆಗೆದುಕೊಳ್ಳುವುದಕ್ಕಾಗದೆ ಗ್ರಾಮೀಣ ಪ್ರದೇಶದಲ್ಲಿ, ಆ ಜ್ವರ ನೆತ್ತಿಗೆ ಏರಿತು ಅದರಿಂದ ಸತ್ತರು ಎಂದೇಳಿ ಸುಮ್ಮನೆ ಆಗುತ್ತಾರೆ. ಆದುದರಿಂದ ಇದನ್ನು ಹಗುರವಾಗಿ ತೆಗೆದುಕೊಳ್ಳುವುದಲ್ಲ, ಸರ್ಕಾರ ಇದನ್ನು ಗಂಭೀರವಾಗಿ ಆಲೋಚಿಸಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ನಮ್ಮ ತಾಲ್ಲೂಕಿನಲ್ಲಿ ಆರು ಜನ ಸತ್ತಿದ್ದು, ಅದರ ಅಂಕಿ ಸಂಖ್ಯೆಗಳು ಇದ್ದರೆ ಸದನಕ್ಕೆ ಕೊಡುವಂತಹ ವ್ಯವಸ್ಥೆಯಾಗಬೇಕು.

ಶ್ರೀ ಎಂ.ಕೆ. ಸೋಮಶೇಖರ : ಮಾನ್ಯ ಚೇರ್‌ಮನ್‌ರವರೆ, ಮೈಸೂರಿನಲ್ಲಿ ಕೂಡ ಇದು ಎಲ್ಲಾ ಕಡೆ ಹರಡಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಸನ್ಮಾನ್ಯ ಆರೋಗ್ಯ ಮಂತ್ರಿಗಳನ್ನು ಕೋರಿಕೊಳ್ಳುತ್ತೇವೆ.

ಶ್ರೀ ಆರ್. ಅಶೋಕ್ : ಮಾನ್ಯ ಚೇರ್‌ಮನ್‌ರವರೆ, ಹಲವಾರು ಸದಸ್ಯರು ಈ ರೋಗದ ಬಗ್ಗೆ ಹಿಂದೆ ನಡೆದಂತಹ ಚರ್ಚೆಯಲ್ಲೂ ಹಲವಾರು ಸಲಹೆ ಸೂಚನೆಗಳನ್ನು ಕೊಟ್ಟಿದ್ದರು. ಈಗಲೂ ಮಾನ್ಯ ನರೇಂದ್ರಬಾಬು ಅವರು ಬೆಂಗಳೂರಿನ ವಿಚಾರವಾಗಿ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಈಗಾಗಲೇ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿದ್ದೇನೆ, ಒಂದು ವಿಚಾರಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಮಯ ಕೊಟ್ಟಿದ್ದಾರೆ. ಒಂದು ಉನ್ನತ ಮಟ್ಟದ ಸಭೆಯನ್ನು, ಇಡೀ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಸಿ.ಇ.ಓ.ಗಳನ್ನು ಹಾಗೂ ಮಹಾನಗರ ಪಾಲಿಕೆಗಳ

ಕಮಿಷನರುಗಳನ್ನು ಈ ಸಭೆಗೆ ಕರೆದು, ಇಡೀ ರಾಜ್ಯದಾದ್ಯಂತ ಈ ಚಿಕೂನ್ ಗುನ್ಯಾ ರೋಗದ ಬಗ್ಗೆ ವ್ಯಾಪಕವಾದಂತಹ ಒಂದು ಆಂಧೋಳನವನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರ ಈಗಾಗಲೇ ಅದರ ಬಗ್ಗೆ ಯೋಚನೆಯನ್ನು ಮಾಡಿದೆ. ಇದನ್ನು ಕಾರ್ಯರೂಪಕ್ಕೆ ತರುವಂಥ ದಿಕ್ಕಿನಲ್ಲಿ ನಾವು ಇದ್ದೇವೆ. ಈಗಾಗಲೇ ಮಾನ್ಯ ನರೇಂದ್ರಬಾಬುರವರು ಹೇಳಿದಂತೆ, ಕೆಲವು ನರ್ಸಿಂಗ್ ಹೋಂಗಳು ಈ ಸಂದರ್ಭವನ್ನು ದುರ್ಲಾಭ ಮಾಡಿಕೊಂಡು ರೋಗಿಗಳನ್ನು ಎಕ್ಸ್‌ಪ್ಲಾಯಿಟ್ ಮಾಡುವಂತಹ ಪರಿಸ್ಥಿತಿಯ ಬಗ್ಗೆ ನಮ್ಮ ಗಮನಕ್ಕೆ ಬಂದಿದೆ. ಆ ದೃಷ್ಟಿಯಿಂದ ಈ ಪ್ರಶ್ನೆ ಅವರದೇ ಇರುವುದರಿಂದ, ಅವರಿಗೆ ನಾನು ಇದಕ್ಕೆ ಉತ್ತರವನ್ನು ಕೊಡುತ್ತೇನೆ. ಈ ಪ್ರೈವೇಟ್ ನರ್ಸಿಂಗ್ ಹೋಂಗಳು ಏನು ಇವೆ, ಈ ಸಂದರ್ಭದಲ್ಲಿ ದುರ್ಲಾಭವನ್ನು ಮಾಡುವಂಥಾದ್ದು, ಇದು ಒಂದೇ ಕಡೆ ಅಲ್ಲ, ಬಹಳ ಕಡೆಗಳಲ್ಲಿ ಈ ರೀತಿಯಾಗುತ್ತಿರುವಂಥಾದ್ದು ಕಂಡು ಬಂದಿದೆ. ಈ ಚಿಕೂನ್ ಗುನ್ಯಾ ರೋಗಕ್ಕೆ ಒಂದು ಪ್ಯಾಕೇಜನ್ನು ಮಾಡುವಂಥಾದ್ದು. ಈ ರೀತಿಯಾದಂತಹ ಅವ್ಯವಹಾರಗಳು ನಮ್ಮ ಗಮನಕ್ಕೆ ಬಂದಿದೆ. ಅದಕ್ಕೆ ಇದನ್ನು ಕಾನೂನಿನ ಅಡಿಯಲ್ಲಿ ತರಬೇಕೆಂದು ಸರ್ಕಾರ ಈಗಾಗಲೇ ಇದರ ಬಗ್ಗೆ ಯೋಚನೆ ಮಾಡುತ್ತಿದೆ. ಈ ಪ್ರೈವೇಟ್ ನರ್ಸಿಂಗ್ ಹೋಂಗಳಲ್ಲಿ ಏನೇನು ಅವ್ಯವಹಾರಗಳಲ್ಲಿ ಏನು ಭಾಗಿಯಾಗಿದೆ, ಮತ್ತೆ ನೇಮಕಾತಿಗಳಲ್ಲಿ ಏನೇನು ವ್ಯತ್ಯಾಸಗಳು ಮಾಡಿದ್ದಾರೆ, ಬಿಲ್‌ಗಳನ್ನು ಮಾಡುವುದರಲ್ಲಿ ಏನೇನು ಅವ್ಯವಹಾರಗಳು ಆಗುತ್ತವೆ, ಈ ಎಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು, ಇನ್ನೊಂದು ಸಂದರ್ಭದಲ್ಲಿ ಇದಕ್ಕೆ ಉತ್ತರವನ್ನು ಕೊಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಮಾನ್ಯ ನರೇಂದ್ರಬಾಬುರವರು ಯಾವ ರೀತಿಯಾಗಿ ಸಲಹೆಗಳನ್ನು ಕೊಟ್ಟಿದ್ದಾರೆ, ಅದರ ಪ್ರಕಾರ ನಾನು ಬೆಂಗಳೂರಿಗೆ ಸಂಬಂಧಪಟ್ಟಂತೆ ಎಲ್ಲಾ ಶಾಸಕರುಗಳ ಸಭೆಯನ್ನು ಕರೆಯುತ್ತೇನೆ. ಈ ಸಭೆಯಲ್ಲಿ ಈ ಚಿಕೂನ್ ಗುನ್ಯಾ ರೋಗವನ್ನು ತಡೆಗಟ್ಟುವುದಕ್ಕೆ ಯಾವ್ಯಾವ ರೀತಿಯಲ್ಲಿ ಮಾಡಬಹುದೆಂಬುದರ ಬಗ್ಗೆ, ಅದು ಎನ್.ಜಿ.ಒ.ಗಳು ಇರಬಹುದು, ಕಾಲೇಜು ವಿದ್ಯಾರ್ಥಿಗಳು ಇರಬಹುದು, ಎನ್.ಎಸ್.ಎಸ್. ಸ್ಟೂಡೆಂಟ್ಸ್ ಇರಬಹುದು, ಇವರೆಲ್ಲರನ್ನೂ ಇನ್‌ವಾಲ್ವ್‌ಮೆಂಟ್ ಮಾಡಿಕೊಳ್ಳಬೇಕು. ಈ ಪ್ರೈವೇಟ್ ನರ್ಸಿಂಗ್ ಹೋಂಗಳು ಏನು ಇವೆ, ಮತ್ತೆ ನಮ್ಮ ಬೆಂಗಳೂರಿನಲ್ಲಿ ಹೈಟೆಕ್ ಆಸ್ಪತ್ರೆಗಳು ಏನು ಇವೆ, ಇವರುಗಳು ಸಹಯೋಗವನ್ನು ತೆಗೆದುಕೊಳ್ಳಬೇಕೆಂಬುದು ಸಲಹೆ ಇದೆ. ಮಾನ್ಯ ಸಿದ್ದರಾಮಯ್ಯನವರು ಈ ಸಲಹೆಗಳನ್ನು ಕೊಟ್ಟಿದ್ದಾರೆ. ಅದು ಏನೆಂದರೆ ಎಲ್ಲಾ ಕಾಲೇಜುಗಳನ್ನು ಇದರಲ್ಲಿ ಏಕೆ ಇನ್‌ವಾಲ್ವ್ ಮಾಡಿಕೊಳ್ಳಬಾರದೆಂಬ ಮಾತನ್ನು ಹೇಳಿದ್ದಾರೆ. ಈ ಎಲ್ಲಾ ದೃಷ್ಟಿಯಿಂದ ಯೋಜನೆ ಮಾಡಿ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಿದೆ. ಇದಕ್ಕೆ ಬೇಕಾದಂತಹ ಎಲ್ಲಾ ರೀತಿಯ ಔಷಧಿಗಳು ಇರಬಹುದು, ಡಾಕ್ಟರ್‌ಗಳು, ಸಿಬ್ಬಂದಿಗಳನ್ನು, ಕಳೆದ 6 ತಿಂಗಳಿನಿಂದ 760 ಜನ ಸಿಬ್ಬಂದಿಗಳನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ನೇಮಕಾತಿಯನ್ನು ಮಾಡಿದ್ದೇವೆ. ಅದು ಆಯುರ್ವೇದಿಕ್ ಇರಬಹುದು, ಹೋಮಿಯೋಪತಿ ಇರಬಹುದು, ಎಂ.ಬಿ.ಬಿ.ಎಸ್. ಡಾಕ್ಟರ್ ಇರಬಹುದು. ಈ ರೀತಿಯಲ್ಲಿ ನಾವು ನೇಮಕಾತಿಯನ್ನು ಪ್ರಾರಂಭ ಮಾಡಿರುವುದರಿಂದ, ಈ ರೋಗವನ್ನು ಈ ರಾಜ್ಯದಿಂದ ಹೊರಗಟ್ಟುವುದಕ್ಕೆ ಏನೇನು ಕ್ರಮಗಳನ್ನು

ತೆಗೆದುಕೊಳ್ಳಬೇಕೋ, ಆ ಎಲ್ಲಾ ಕ್ರಮಗಳನ್ನು ಮಾನ್ಯ ಸದಸ್ಯರುಗಳ ಸಲಹೆಯ ಮೇರೆಗೆ ತೆಗೆದುಕೊಳ್ಳುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ನಮ್ಮ ಹಿರಿಯ ಸದಸ್ಯರಾದಂಥ ಮಾನ್ಯ ವಾಟಾಳ್ ನಾಗರಾಜ್‌ರವರು, ಈ ರೋಗ ಬಡವರಿಗೆ ಮಾತ್ರ ಬರಬೇಕಾ ಎಂಬ ಮಾತನ್ನು ಹೇಳಿದರು. ಆ ರೀತಿ ಏನೂ ಇಲ್ಲ, ಇದು ರಸ್ತೆಗಳಲ್ಲಿ ಕೊಳಚೆ ನೀರಿನಲ್ಲಿ ಉತ್ಪತ್ತಿಯಾಗುವಂತಹ ಸೊಳ್ಳೆಯಲ್ಲ. ಇದು ಒಂದು ರೀತಿಯ ಹೈಟೆಕ್ ಸೊಳ್ಳೆಯೇ ಆಗಿದೆ. ಇದು ಮನೆಯಲ್ಲಿ ಶೇಖರಣೆ ಮಾಡಿರುವಂಥ ಕುಡಿಯುವ ನೀರು ಇರಬಹುದು, ಸ್ನಾನದ ನೀರು ಇರಬಹುದು, ಅಥವಾ ರೆಫ್ರಿಜರೇಟರ್‌ನಲ್ಲಿ ಇರತಕ್ಕಂಥ ನೀರು ಇರಬಹುದು, ಅಥವಾ ಮನೆಗಳಲ್ಲಿ ಶೋಗೆ ಇರುವಂತಹ ಪಾಟ್‌ಗಳ ನೀರು ಇರಬಹುದು, ಅಥವಾ ಚಲನಚಿತ್ರ ಮಂದಿರಗಳಲ್ಲಿ ಫಯರಿಗೋಸ್ಕರ ಇಡುವಂತಹ ನೀರು ಇದು ಒಂದು ತಿಂಗಳು ಕಾಲ, ಎರಡು ತಿಂಗಳುಗಳ ಕಾಲ ಅಲ್ಲ, ಅದನ್ನೇ ಇಟ್ಟಿರುವಂತಹ ಕಡೆಗಳಲ್ಲಿ ಈ ಸೊಳ್ಳೆಗಳು ಉತ್ಪತ್ತಿ ಮಾಡುವಂಥಾದ್ದು. ಆ ದೃಷ್ಟಿಯಿಂದ ಇದು ಹೈಟೆಕ್ ಸೊಳ್ಳೆಯಾಗಿದೆ. ಈ ಸೊಳ್ಳೆ ರಾತ್ರಿ ಹೊತ್ತು ಕಚ್ಚುವಂಥ ಸೊಳ್ಳೆಯಲ್ಲ. ಇದು ಹಗಲಿನ ಹೊತ್ತು ಕಚ್ಚುತ್ತದೆ. ಮಲೇರಿಯಾ ಸೊಳ್ಳೆಗಳಿಗೆ 3 ಕಿ.ಮೀ.ಗಳವರೆಗೂ ಫ್ಲೈಯಿಂಗ್ ರೇಂಜ್ ಇರುತ್ತದೆ. ಇದಕ್ಕೆ ಆ ರೀತಿ ಇರುವುದಿಲ್ಲ, ಇದಕ್ಕೆ 300 ಮೀಟರ್ ಮಾತ್ರ ಫ್ಲೈಯಿಂಗ್ ರೇಂಜ್ ಇರುತ್ತದೆ. ಆದರೆ ಈ ಸೊಳ್ಳೆ ಪದೇಪದೇ ಕಚ್ಚುತ್ತದೆ. ಈ ಮಲೇರಿಯಾ ಸೊಳ್ಳೆ ಒಂದು ಸಾರಿ ಕಚ್ಚಿದರೆ, ಮತ್ತೊಂದು ಸಾರಿ ಕಚ್ಚುವುದಿಲ್ಲ. ಆದರೆ ಈ ಸೊಳ್ಳೆ ಮನೆಗಳಲ್ಲಿ ಇದ್ದರೆ, ಅದು ಪದೇ ಪದೇ ಕಚ್ಚುವಂತಹ ಅಭ್ಯಾಸ ಇರುವಂಥ ಸೊಳ್ಳೆಯಾಗಿದೆ. ಆದುದರಿಂದ ಈ ರೋಗ ಬಡವರಿಗೆ ಬರುವಂಥಾದ್ದು ಅಲ್ಲ. ನಮ್ಮ ಬೀದರ್ ಎಂ.ಎಲ್.ಎ. ಆಗಿರುವಂಥ ಖಿಂಡ್ರೆಯವರಿಗೂ ಬಂದಿತ್ತು. ಇದು ಎಲ್ಲಾ ಜಾತಿ, ಜನಾಂಗ, ಬಿಟ್ಟು ಬಡವರು ಶ್ರೀಮಂತರು ಎಂದು ಇಲ್ಲ. ಈ ಸೊಳ್ಳೆ ಎಲ್ಲರನ್ನೂ ಕಚ್ಚುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಬಗ್ಗೆ ನಾನು ಈಗಾಗಲೇ ಆಯುರ್ವೇದಿಕ್ ಡಿಪಾರ್ಟ್‌ಮೆಂಟಿನವರಿಗೂ ಹೇಳಿದ್ದೇನೆ. ನಮ್ಮ ಇಲಾಖೆಯಲ್ಲಿರುವಂತಹ ಹೋಮಿಯೋಪತಿಕ್‌ನವರು – – –

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಚೇರ್ಮನ್‌ರವರೆ, ಇಲ್ಲಿ "ಉಷಾ ಕಿರಣ" ಪತ್ರಿಕೆಯ ಸುದ್ದಿ ಸಂಪಾದಕರಾದ ಶ್ರೀ ಜಯರಾಮ ಅಡಿಗರು, ಚಿಕೂನ್ ಗುನ್ಯಾ ರೋಗಕ್ಕೆ ತುತ್ತಾಗಿದ್ದಾರೆ, ಅಲ್ಲಿಂದ ಮತ್ತೆ ಹೆಸರುಗಳು ಹೇಳಲು ಇಚ್ಛಿಸದೆ ನಾಲ್ಕು ಮಂದಿ ಪತ್ರಕರ್ತರಿಗೂ ಈ ರೋಗ ಬಂದಿದೆ. ಈ ರೋಗ ಬಹಳ ಅಪಾಯ ನಾಳೆ ದಿವಸ ನಮ್ಮ ಶಾಸನ ಸಭೆಯೊಳಗೆ ಬಂದರೆ ಅಪಾಯವಿದೆ. ಆದುದರಿಂದ ಈ ರೋಗ ಬರದ ರೀತಿಯಲ್ಲಿ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಾ ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು.

ಶ್ರೀ ನೆ. ಲ. ನರೇಂದ್ರಬಾಬು : ಮಾನ್ಯ ವಾಟಾಳ್ ನಾಗರಾಜ್‌ರವರು ಕೇಳಿದ ಹಾಗೆ ನಮ್ಮ ಮಾಜಿ ಸಚಿವರಾದ ಮಾನ್ಯ ನಾಗಪ್ಪನವರಿಗೂ ಬಂದಿದೆ.

ಶ್ರೀ ಆರ್. ಅಶೋಕ್ : ಮಾನ್ಯ ಚೇರ್ಮನ್‌ರವರೆ, ಈ ರೋಗ ಶಾಸಕರುಗಳಿಗೆ ಬಂದರೆ ಎಂದು ಅಲ್ಲ. ಇಡೀ ರಾಜ್ಯದ ಎಲ್ಲಾ ಜನತೆಗೂ ಬಂದರೂ ಎಲ್ಲಾ ಕ್ರಮಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ಇದು ಸರ್ಕಾರದ ಕರ್ತವ್ಯವೂ ಇದೆ. ಇದರಲ್ಲಿ ಯಾವುದೇ ರೀತಿಯ ವ್ಯತ್ಯಾಸವನ್ನು ನಾವು ಮಾಡುವುದಕ್ಕೆ ತಯಾರು ಇಲ್ಲ.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಚೇರ್ಮನ್‌ರವರೆ, ಈ ರೋಗದಿಂದ ಸುಮಾರು 80 ಲಕ್ಷ ಜನರು ನರಳುತ್ತಿದ್ದಾರೆ. ಇದಕ್ಕೆ ನಾಲ್ಕು ಕೋಟಿ ರೂಪಾಯಿಗಳನ್ನು ಬಿಡುಗಡೆ ಆಗಿದೆ. ಮಾನ್ಯ ಸಚಿವರೇ, ತಾವು ಹೇಳುವಂಥಾದ್ದನ್ನು ಒಪ್ಪುತ್ತೇವೆ. ಆದರೆ ಈ ಹಣ ಬಿಡುಗಡೆಯಾಗಿರುವಂಥಾದ್ದು ಕೇವಲ ನಾಲ್ಕು ಕೋಟಿ ರೂಪಾಯಿಗಳು ಮಾತ್ರ. ಮಾನ್ಯ ಯಡಿಯೂರಪ್ಪನವರು ಏಕೆ ಬಿಡುಗಡೆ ಮಾಡುತ್ತಿಲ್ಲವೋ, ಗೊತ್ತಿಲ್ಲ. ಮಾನ್ಯ ಅಶೋಕ್‌ನವರು ಮಾನ್ಯ ಅನಂತಕುಮಾರ್‌ರವರ ಗುಂಪು ಎಂದು ಇವರು ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಅಷ್ಟೆ. ಇಲ್ಲಿ ಕೇವಲ 4 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ, ಹೇಗೆ? ಮಾನ್ಯ ಆರ್. ಅಶೋಕ್‌ರವರು ಒಳ್ಳೆಯ ಸಚಿವರು ಆಗಿದ್ದಾರೆ. ನಾನು ಅವರ ಬಗ್ಗೆ ಏನೂ ಹೇಳುವುದಿಲ್ಲ. He is very active. ಅವರು ಎಲ್ಲಾ ಕಡೆಗಳಲ್ಲೂ ಓಡಾಡಿದ್ದಾರೆ. ನಮ್ಮ ಜಿಲ್ಲೆಗೂ ಬಂದಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ. ಇದಕ್ಕೆ 4 ಕೋಟಿ ರೂಪಾಯಿಗಳನ್ನು ಕೊಟ್ಟು, ಈ ರೋಗಕ್ಕೆ 80ಲಕ್ಷ ಜನರು ತುತ್ತಾಗಿರುವಂಥ ರೋಗಿಗಳ ಬಗ್ಗೆ ಚಿಕಿತ್ಸೆ ಮಾಡಿ ಎಂದರೆ ಇದು ಸಾಧ್ಯನಾ? ಈ ರೀತಿ ಮಾನ್ಯ ಯಡಿಯೂರಪ್ಪನವರು ಮಾನ್ಯ ಆರ್. ಅಶೋಕ್‌ರವರ ವಿರುದ್ಧ ಮಾಡಿರುವಂತಹ ಪಿತೂರಿ ಇದು.

(ಗೊಂದಲ)

ಚೇರ್ಮನ್ : ಸದನದಲ್ಲಿ ಮೊನ್ನೆ ದಿವಸ ಈ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆಯಾಗಿದೆ, ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಚೇರ್ಮನ್‌ರವರೆ, ನನ್ನ ಬಳಿ ಇರುವ ಮಾಹಿತಿಗಳನ್ನು ತಮ್ಮ ಗಮನಕ್ಕೆ ಕಳುಹಿಸಿಕೊಡುತ್ತೇನೆ.

(ಈ ಹಂತದಲ್ಲಿ ಮಾನ್ಯ ನೆ.ಲ. ನರೇಂದ್ರಬಾಬುರವರು ಕೆಲವು ಕಾಗದ ಪತ್ರಗಳನ್ನು ಚೇರ್ಮನ್‌ರವರಿಗೆ ಕಳುಹಿಸಿಕೊಟ್ಟರು)

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಚೇರ್ಮನ್‌ರವರೆ, ಈ ರೋಗಕ್ಕೆ ಸಂಬಂಧಪಟ್ಟಂತೆ ಮೊನ್ನೆ ದಿವಸ ಪತ್ರಿಕೆಯಲ್ಲಿ ವಿಷಯ ಬಂದಿತ್ತು. ಇದಕ್ಕೆ ಸಂಬಂಧಪಟ್ಟಂತೆ ಹೈದರಾಬಾದಿನಲ್ಲಿ ಕತ್ತೆ ಹಾಲು ಈ ರೋಗಕ್ಕೆ ಬಹಳ ಎಫೆಕ್ಟ್ ಆಗುತ್ತದೆಂಬ ವಿಚಾರ ಪ್ರಸ್ತಾಪ ಮಾಡಿತ್ತು. ಇದು ಆಯುರ್ವೇದದ ಔಷಧಿಯಾಗಿದೆ, ದಯವಿಟ್ಟು ತಾವು ಅದನ್ನು ಪರಿಶೀಲನೆಯನ್ನು ಮಾಡಬೇಕು. ಇದರ ಬಗ್ಗೆಯೂ

ತಾವು ಪ್ರಯೋಗವನ್ನು ಮಾಡಿಸಿ. ಈ ಹಾಲು ಒಂದು ಲೀಟರ್‌ಗೆ ಒಂದು ಸಾವಿರ ರೂಪಾಯಿಗಳು ಹೈದರಾಬಾದ್‌ನಲ್ಲಿ ಮಾರಾಟವಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಂತ್ರಿಗಳೆ, ಕತ್ತೆ ಹಾಲು ಚಿಕೂನ್ ಗುನ್ಯಾ ರೋಗಕ್ಕೆ ಒಳ್ಳೆಯದೆಂದು ಬಂದಿದೆ. ಆದುದರಿಂದ ತಾವು ಇದರ ಬಗ್ಗೆ ಯೋಚನೆ ಮಾಡಿ. ಕತ್ತೆಗಳನ್ನು ಹಿಡಿದು ಏನಾದರೂ ಮಾಡುವುದಾದರೆ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್ : ಇದು ಹುಡುಗಾಟವಲ್ಲ, ಏನೋದದ ಮಾತು ಅಲ್ಲ. ಇವು ಆಯುರ್ವೇದದ ಔಷಧಿಗಳು, ತಾವು ಇದರ ಬಗ್ಗೆ ತೆಗೆದು ನೋಡಿ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಚೇರ್ಮನ್‌ರವರೆ, ಇಲ್ಲಿ ಪೇಪರ್‌ನಲ್ಲಿ ಕತ್ತೆ ಹಾಲನ್ನು ಕುಡಿದರೆ ರೋಗ ವಾಸಿಯಾಗುತ್ತದೆಂದು ಹೇಳಿದ್ದಾರೆ. ನಮ್ಮ ಊರಿನಲ್ಲಿ ಹಂದಿಯ ಹಾಲನ್ನು ಕುಡಿದರೆ ಇನ್ನು ಬೇಗ ಈ ರೋಗ ವಾಸಿಯಾಗುತ್ತದೆಂದು ಹೇಳುತ್ತಿದ್ದರು.

ಶ್ರೀ ಶಿವರಾಜ್ ಸಜ್ಜನರ್ : ಮಾನ್ಯ ಚೇರ್ಮನ್‌ರವರೆ, ನಾನು ಕಳೆದ ಸೋಮವಾರವೂ ಸಭೆಯಲ್ಲಿ ಮಾತನಾಡಿದ್ದೆ. ಆಗ ಮಾನ್ಯ ಮಂತ್ರಿಯವರು ಸದನದಲ್ಲಿ ಇರಲಿಲ್ಲ. ನಮ್ಮ ಹಾವೇರಿ ನಗರದಲ್ಲಿ ಒಬ್ಬ ಕರಿಮರಿಮರ್ ಎಂಬ ಒಬ್ಬ ವೈದ್ಯ ಇದ್ದಾನೆ. ಇವನ ಒಂದು ಆಸ್ಪತ್ರೆಯು ಇದೆ. ಅಲ್ಲಿ ಚಿಕೂನ್ ಗುನ್ಯಾ ರೋಗವನ್ನು ಕೇವಲ 24 ಗಂಟೆಗಳಲ್ಲಿ ನಾನು ವಾಸಿ ಮಾಡುತ್ತೇನೆಂದು, ಇವನು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್‌ರವರ ಫೋಟೋ ಇಂಪೋಸ್ ಮಾಡಿ, ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ಕೊಟ್ಟಿದ್ದಾನೆ. ಇಲ್ಲಿ ಪತ್ರಿಕೆಯವರಿಗೂ ಮೋಸ ಮಾಡಿದ್ದಾನೆ. ಮತ್ತೆ ಜನಗಳಿಗೂ ಮೋಸ ಮಾಡುವಂತಹ ಕಾರ್ಯ ಈ ವೈದ್ಯನಿಂದ ನಡೆಯುತ್ತಿದೆ. ಅಲ್ಲಿ ಸಭೆಗೆ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್‌ರವರು ಹೋಗಿಲ್ಲ. ಆದರು ಈ ಸಭೆಗೆ ಆಫೀಸರ್‌ರವರು ಹಾಜರಾಗಿದ್ದಾರೆಂದು, ಅವರ ಫೋಟೊವನ್ನು ದುರ್ಬಳಕೆಯನ್ನು ಮಾಡಿಕೊಂಡು, ಅಲ್ಲಿ ಜನರಿಗೆ ಚೀಟ್ ಮಾಡುವಂತಹ ಕೆಲಸವನ್ನು ನಡೆಸುತ್ತಿದ್ದಾರೆ. ಈ ನಕಲಿ ವೈದ್ಯರ ಹಾವಳಿಯಿಂದ, ಈ ಚಿಕೂನ್ ಗುನ್ಯಾ ರೋಗ ಪೀಡಿತರು ಏನು ಇದ್ದಾರೆ, ಆ ಅಮಾಯಕ ಜನರನ್ನು ಇವತ್ತು ಲೂಟಿ ಮಾಡುವಂತಹ, ಕೆಲಸ ನಡೆಯುತ್ತಿದೆ. ಆದುದರಿಂದ ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ಈ ನಕಲಿ ವೈದ್ಯರುಗಳನ್ನು ಗುರುತಿಸಿ, ಅವರ ಮೇಲೆ ಕಾನೂನು ಕ್ರಮವನ್ನು ತೆಗೆದುಕೊಳ್ಳಬೇಕು. ಕರಿಮರಿಮರ್ ಎನ್ನುವ ವ್ಯಕ್ತಿಯು ಕ್ವಾಲಿಫೈಡ್ ಅಲ್ಲ. ಅವರ ಎಲ್ಲಾ ಡಾಕ್ಯುಮೆಂಟ್ ಅನ್ನು ಸಂಪೂರ್ಣವಾಗಿ, ಪರಿಶೀಲನೆ ಮಾಡಿ, ಅವನ ಆಸ್ಪತ್ರೆಯನ್ನು ಸೀಜ್ ಮಾಡಿ, ಅವನ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದು ಪತ್ರಿಕೆಯಲ್ಲಿ ಬಂದ ನಂತರ ಮರುದಿವಸವೇ ಅವನು ಆಸ್ಪತ್ರೆಯ ಬಳಿ ನೂರಾರು ಜನರ ಕ್ಯೂ ಮಾಡಿ, 75 ರೂ.ಗಳಿಗೆ ಒಂದು ಗುಳಿಗೆಯನ್ನು ಮಾರಾಟ ಮಾಡುತ್ತಿದ್ದನು. ಆದುದರಿಂದ ಈ ಅಮಾಯಕ ಜನರನ್ನು ಲೂಟಿ ಮಾಡುತ್ತಿದ್ದಾನೆ. ತಾವು ದಯಮಾಡಿ ಇವನ ಮೇಲೆ ಶೀಘ್ರವಾಗಿ,

ಅವನ ಆಸ್ಪತ್ರೆಯನ್ನು ಸೀಜ್ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಚೇರ್ಮನ್‌ರವರೆ, ನಾನು ಈಗಾಗಲೇ ಮಾನ್ಯ ನರೇಂದ್ರಬಾಬುರವರ ಪ್ರಶ್ನೆಗೆ ಉತ್ತರವನ್ನು ಕೊಡುವ ಸಂದರ್ಭದಲ್ಲಿ, ನಾನು ಈ ಮಾತನ್ನು ಹೇಳಿದ್ದೇನೆ. ಕೆಲವು ವೈದ್ಯರುಗಳು, ಈ ರೋಗದ ಹೆಸರನ್ನು ಹೇಳಿ ಜನರನ್ನು ಎಕ್‌ಪ್ಲಾಯಿಟ್ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಈಗ ಪತ್ರಿಕೆಗಳಲ್ಲಿ ಆ ರೀತಿಯ ಜಾಹೀರಾತುಗಳು ಬಂದಿರುವಂಥಾದ್ದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಅವರು ನಮ್ಮ ಎಂ.ಬಿ.ಬಿ.ಎಸ್. ಡಾಕ್ಟರ್ ಇರಬಹುದು, ಆಯುರ್ವೇದಿಕ್ ಡಾಕ್ಟರ್ ಇರಬಹುದು, ಆ ರೀತಿ ಕೊಟ್ಟಿರುವಂಥಾದ್ದು ತಪ್ಪಾಗುತ್ತದೆ. ಆ ದೃಷ್ಟಿಯಿಂದ ಕಾನೂನು ಪ್ರಕಾರ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ, ಆ ರೀತಿಯಲ್ಲಿ ಎಲ್ಲಾ ಕ್ರಮಗಳನ್ನು ಆ ವೈದ್ಯರುಗಳ ಮೇಲೆ ತೆಗೆದುಕೊಳ್ಳುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ರೀತಿಯಲ್ಲಿ ಹಲವಾರು ಘಟನೆಗಳು ರಾಜ್ಯದಲ್ಲಿ ನಡೆದಿರುವುದರಿಂದ ಬೇರೆ ಬೇರೆ ಸಂದರ್ಭಗಳಲ್ಲಿ, ವೈದ್ಯರ ನಿರ್ಲಕ್ಷ್ಯ, ಈ ಪ್ರೈವೇಟ್ ನರ್ಸಿಂಗ್ ಹೋಂಗಳಲ್ಲಿ ನಿರ್ಲಕ್ಷ್ಯದಿಂದಾಗಿ, ಸಾವು ನೋವುಗಳು ಆಗಿರುವುದರಿಂದ, ಇದರ ಬಗ್ಗೆ ಸಮಗ್ರವಾಗಿ ಇದರ ಬಗ್ಗೆ ಒಂದು ವಿಧೇಯಕವನ್ನು ತರುವುದರಿಂದ, ಇಲ್ಲಿ ಅವರನ್ನೂ ಸಹ ಹಿಡಿತದಲ್ಲಿ ಇಡಬೇಕು. ಈ ಬಿಲ್ ಮಾಡುವ ಬಗ್ಗೆ, ಈ ರೀತಿ ಪತ್ರಿಕಾ ಹೇಳಿಕೆ ಕೊಡುವಂಥಾದ್ದು ಇರಬಹುದು, ಬೇರೆ ಬೇರೆ ಸಂದರ್ಭಗಳಲ್ಲಿ ಜನಸಾಮಾನ್ಯರನ್ನು ಎಕ್ಸ್‌ಪ್ಲಾಯಿಟ್ ಮಾಡುವುದಕ್ಕೆ ಹೋಗುವಂತಹ ಸಂದರ್ಭದಲ್ಲಿ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕಾದರೆ, ಅದಕ್ಕೆ ಒಂದು ವಿಧೇಯಕ ಬೇಕಾಗುತ್ತದೆ. ಆ ದಿಕ್ಕಿನಲ್ಲೂ ಸಹ ಸರ್ಕಾರ ಪರಿಶೀಲನೆಯನ್ನು ಮಾಡುತ್ತಿದೆ. ಆದಷ್ಟು ಬೇಗ ಈ ವಿಧೇಯಕವನ್ನು ತರುವಂತಹ ಕೆಲಸವನ್ನು ನಾನು ಮಾಡುತ್ತೇನೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಚಿಕುನ್ ಗುನ್ಯಾ ರೋಗಕ್ಕೆ ಹೋಮಿಯೊಪತಿ ಔಷಧಿ ಬಹಳ ಪರಿಣಾಮಕಾರಿಯಾಗಿದೆಯೆಂಬ ಮಾತನ್ನು ಈಗಾಗಲೇ ಹಲವು ಸದಸ್ಯರು ವ್ಯಕ್ತಪಡಿಸಿದ್ದಾರೆ. ಈಗಾಗಲೇ ನಾನು ನಮ್ಮ ನಿರ್ದೇಶಕರಿಗೂ ತಿಳಿಸಿದ್ದೇನೆ. ಇನ್ನು ಒಂದೆರಡು ದಿವಸಗಳಲ್ಲಿ ಸರಿಯಾದಂತಹ ಮಾಹಿತಿಯನ್ನು ನೀಡಬೇಕೆಂದು, ನಮ್ಮ ವೈದ್ಯರಿಗೆ, ನಿರ್ದೇಶಕರಿಗೆ ತಿಳಿಸುತ್ತೇನೆ. ಕೋಲಾರದಲ್ಲಿ ಔಷಧಿ ಸಿಗಲಿಲ್ಲ ಎಂದು ಗಲಾಟೆ ನಡೆದಿರ ತಕ್ಕಂಥಾದ್ದು ನನ್ನ ಗಮನಕ್ಕೆ ಬಂದಿದೆ. ಹಾಗಾಗಿ, ಏನೇನು ಸಾಧ್ಯವಿದೆಯೋ ಆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲು ನಾವು ಸಿದ್ಧರಿದ್ದೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತೀರಿ. ಕೆಲವರು, ಹೋಮಿಯೋಪತಿ ಔಷಧಿಯಿಂದ ಎರಡು ದಿವಸಗಳಲ್ಲಿ ನಾವು ರೋಗವನ್ನು ಕ್ಲಿಯರ್ ಮಾಡುತ್ತೇವೆ ಎಂದು ಹೇಳುತ್ತಿದ್ದು, ಅವರನ್ನು ಅರೆಸ್ಟ್ ಮಾಡುವಿರಾ ?

ಶ್ರೀ ಆರ್. ಅಶೋಕ್ : ಸದಸ್ಯರಿಗೆ ತಪ್ಪು ತಿಳುವಳಿಕೆ ಬರುವುದು ಬೇಡ ನಾವು ನಮ್ಮ ನಿರ್ದೇಶಕರಿಗೆ ಹೇಳಿದ್ದೇವೆ. ಚಿಕೂನ್ ಗುನ್ಯಾ ಬಂದಿರುವ ರೋಗಿಗಳಿಗೆ ಹೋಮಿಯೋಪತಿ

ಔಷಧಿಯನ್ನು ಕೊಟ್ಟರೆ, ಅದು ಬೇಗ ವಾಸಿಯಾಗುತ್ತದೆ ಎಂದರೆ, ಹೋಮಿಯೋಪತಿ ಔಷಧಿಯನ್ನು ಹೆಚ್ಚಾಗಿ ಬಳಕೆ ಮಾಡತಕ್ಕಂಥಾದ್ದು ಒಳ್ಳೆಯದು. ಕೆಲವರು ಪತ್ರಿಕೆಗಳಲ್ಲಿ ಪ್ರಚಾರ ಕೊಟ್ಟು, ಇಷ್ಟೇ ದಿನಗಳಲ್ಲಿ ವಾಸಿ ಮಾಡುತ್ತೇವೆ ಎನ್ನುವಂಥ ಫ್ರಾಡ್ ಮಾಡಿದ್ದಾರೆ. ದುಡ್ಡು ವಸೂಲಿಗೋಸ್ಕರ ಆ ರೀತಿ ಮಾಡುತ್ತಿದ್ದಾರೆ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ಅವರ ಮೇಲೆ ಏನು ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಮುಂಡರಗಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಕಟ್ಟಡದ ನಿರ್ಮಾಣದ ಬಗ್ಗೆ.

175 (617): ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಂಡರಗಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ಕೆ.ಐ.ಎ.ಡಿ.ಬಿ. ಯವರಿಂದ ಹಂಚಿಕೆ ಆಗಿರುವ ನಿವೇಶನಕ್ಕೆ ಹೆಚ್ಚಿಸಿದ ಬೆಲೆಯನ್ನು ಪಾವತಿಸದೇ ನಿವೇಶನವನ್ನು ಹಸ್ತಾಂತರಿಸುವಂತೆ ದಿನಾಂಕ 12-7-05ರಂದು ನಡೆದ ಮಾನ್ಯ ಕೈಗಾರಿಕಾ ಸಚಿವರು ಅಧ್ಯಕ್ಷತೆಯನ್ನು ನಡೆದ ಸಭೆಯಲ್ಲಿ ತೀರ್ಮಾನಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಈ ನಿವೇಶನವನ್ನು ತೆಗೆದುಕೊಂಡು ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ದಿನಾಂಕ 12-7-2005ರಂದು ಮಾನ್ಯ ಕೈಗಾರಿಕಾ ತರಬೇತಿ ಸಚಿವರು ಅಧ್ಯಕ್ಷತೆಯಲ್ಲಿ ನಡೆದ ಸಭೆಯು ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

ಆ) ಸದರಿ ನಿವೇಶನಕ್ಕೆ ಕೆಐಎಡಿಬಿ ಯವರು ಹೆಚ್ಚಿಸಿರುವ ಬೆಲೆಯನ್ನು ಪಾವತಿಸಿದ ನಂತರ ಇಲಾಖೆಯು ಕಟ್ಟಡ ಅಂದಾಜನ್ನು ಅನುಮೋದಿಸಿದ ನಂತರ ಅನುಧಾನ ಲಭ್ಯತೆಯನ್ನು ಗಮನಿಸಿ ಕಟ್ಟಡದ ಕೆಲಸವನ್ನು ತೆಗೆದುಕೊಳ್ಳಲಾಗುವುದು. ಆದಾಗ್ಯೂ ಹೆಚ್ಚುವರಿ ಹಣವನ್ನು ಪಾವತಿಸುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ.

ಶ್ರೀ ಎಸ್. ಎಸ್. ಪಾಟೀಲ್ : ನಿಮ್ಮ ಅಧಿಕಾರಿಗಳು ಹೇಗಿರುತ್ತಾರೆಂದರೆ, ಅವರು ಹಣವನ್ನೇ ಮಾಡಿಕೊಳ್ಳುವುದಿಲ್ಲ. ಹಿಂದೆ ಕರೆದಂಥ ಮೀಟಿಂಗಿನಲ್ಲಿ ಹಿಂದಿನ ಮಂತ್ರಿಗಳೂ ಹಾಜರಿದ್ದರು. ಬಹುಶಃ ಹಿಂದಿನ ಕೈಗಾರಿಕಾ ಸಚಿವರಾದ ಸಿಂಧ್ಯಾರವರು ಮೀಟಿಂಗ್ ಕರೆದಿದ್ದರು. ಆ ದಿವಸ ಹೆಚ್ಚಿನ ಹಣ ತುಂಬುವುದು ಅವಶ್ಯಕತೆಯಿಲ್ಲ, ನಾವು ಮಾಡುತ್ತೇವೆ ಎಂದು ಹೇಳಿದ್ದರು. ಇವತ್ತು ಫೈನಾನ್ಸ್ ಸೆಕ್ರೆಟರಿಯಾಗಿರುವಂಥವರು, ಅವತ್ತು ಇಂಡಸ್ಟ್ರಿ ಸೆಕ್ಟೆಟರಿಯಾಗಿದ್ದರು. ಆಗ ನಿಮ್ಮವರ್ಯಾರಾದರೂ ಹಾಜರಾಗಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. 12-7-2005 ರಂದು ನಡೆದ ಸಭೆಯಲ್ಲಿ ಎಂದು ನಾನು ನಿರ್ದಿಷ್ಟವಾಗಿ ದಿನಾಂಕವನ್ನು ಹೇಳಿದ್ದೇನೆ. ಕೊನೆಯ ಪಕ್ಷ ಆ ಡಿಪಾರ್ಟ್‌ಮೆಂಟಿಗೆ ಫೋನ್ ಮಾಡಿ ಆ ದಿನ ಆ ರೀತಿ ಆಗಿತ್ತೋ, ಇಲ್ಲವೋ ಎಂದು ತಿಳಿದುಕೊಳ್ಳಲು ಇವರಿಗೆ ಜವಾಬ್ದಾರಿಯಿಲ್ಲವೇ? ಬಹುತೇಕ ಇದು ನಿಮ್ಮ ಡೈರೆಕ್ಟರ್‌ರವರಿಗೂ ಗೊತ್ತಿದೆ ಎಂದು ನನಗನ್ನಿಸುತ್ತದೆ. ಈಗ ಡೈರೆಕ್ಟರ್ ಬದಲಾಗಿದ್ದಾರೋ, ಏನೋ ಎನ್ನುವುದು ನನಗೆ ಗೊತ್ತಿಲ್ಲ. ಅದಕ್ಕೆ